ಓ.ಎಸ್. ನಂಬರ 39/19

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 01-06-2023.

**ಪಾಟೀ ಸವಾಲು ಃ ಶ್ರೀ ಬಿ.ಎಫ್.ಪಿ. ಪ್ರತಿವಾದಿಗಳ ಪರ ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ಪತ್ನಿಯ ಖಾಸಾ ಸಹೋದರಿ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಪತ್ನಿಯ ಸಹೋದರಿಯ ಗಂಡ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯವರು ವಿವಾಹವಾದಾಗಿನಿಂದಲೂ ಮಸ್ಕತ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಸದ್ರಿಯವರು ಮಸ್ಕತ್ ನಲ್ಲಿ ವೆಲ್ಡಿಂಗ್ ವರ್ಕಶಾಪ್ ನ್ನು ಇಟ್ಟುಕೊಂಡಿದ್ದರು. 1 ಮತ್ತು 2 ನೇ ಪ್ರತಿವಾದಿಯವರು ಮಸ್ಕತ್ ನಲ್ಲಿ ಬೇರೆ ನೌಕರಿ ಮಾಡುತ್ತಿರಲಿಲ್ಲ. ನನ್ನ ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಮಸ್ಕತ್ ನಲ್ಲಿ ಖಾಸಗಿ ನೌಕರಿ ಮಾಡುತ್ತಿರುವದರ ಬಗ್ಗೆ ಹೇಳಿರುವುದಿಲ್ಲ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ 2 ನೇ ಪ್ರತಿವಾದಿಯವರು ತನ್ನ ಪತ್ನಿ 1 ನೇ ಪ್ರತಿವಾದಿಯೊಂದಿಗೆ ಮಸ್ಕತ್ ದೇಶದಲ್ಲಿ ಕೆಲವು ವರ್ಷಗಳಿಂದ ವಾಸವಾಗಿ ಅಲ್ಲಿ ಖಾಸಗಿ ನೌಕರಿ ಮಾಡುತ್ತಿರುವ ಬಗ್ಗೆ ಹೇಳಿರುತ್ತೇನೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

2. ನಾನು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ನಾನು ದಾವಾ ಸ್ವತ್ತಿಗೆ ಮಾಡಿದ ಖರ್ಚನ್ನು ವಾಪಸ್ ಕೊಡಬೇಕು ಇಲ್ಲವೇ ನಾನು ಮಾಡಿದ ಕೆಲಸಕ್ಕೆ ಪಗಾರ ಕೊಡಬೇಕೆಂದು ಕೇಳಿರುತ್ತೇನೆ. ನನ್ನ ಪತ್ನಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ ಆಗಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತಿ ಹೊಂದಿರುತ್ತಾರೆ. ನನ್ನ ಪತ್ನಿ ಸೇವೆಯಲ್ಲಿದ್ದಾಗ ಆಕೆಗೆ ಕಡಿಮೆ ಪಗಾರ ಇತ್ತು ಎಂದರೆ ಸರಿಯಲ್ಲ. 50 ಸಾವಿರ ರೂ. ಪಗಾರ ಇತ್ತು. ನಾನು ಆರ್ಥಿಕವಾಗಿ ಬಲಾಢ್ಯನಾಗಿಲ್ಲ ಎಂದರೆ ಸರಿ.

3. ದಾವಾ ಆಸ್ತಿಯ ಮುಂಡಗೋಡ ಗ್ರಾಮದ ಸರ್ವೆ ನಂ. 78 ಆಗಿರುತ್ತದೆ. ಅದರಲ್ಲಿ ಒಟ್ಟೂ 9 ಎಕರೆ 2 ಗುಂಟೆ ಜಮೀನು ಇರುತ್ತದೆ. ನನಗೆ ಸದ್ರಿ ಜಮೀನಿನ ಚಕ್ಕುಬಂಧಿ ಹೇಳಬಹುದು. ಪೂರ್ವಕ್ಕೆ ಕ್ಯಾಸನಕೇರಿ ಕೆರೆ ಹಾಗೂ ರಸ್ತೆ, ಪಶ್ಚಿಮಕ್ಕೆ ಮಕ್ತುಂ ಅಂಟಾಳ ರವರ ಜಮೀನು, ಉತ್ತರಕ್ಕೆ ಲಿಂಗಪ್ಪ ಕುರುಬರ ರವರ ಜಮೀನು, ದಕ್ಷಿಣಕ್ಕೆ ಶಾಂತಪ್ಪ ಪಾಟೀಲ ಮತ್ತು ನಂದಿಗಟ್ಟಿರವರ ಜಮೀನು. ನನ್ನ ಹೆಸರಿಗೆ ಜಮೀನಿರುವುದಿಲ್ಲ. ನಾನು ಅಡಿಕೆ ತೋಟ ಗುತ್ತಿಗೆ ತೆಗೆದುಕೊಂಡು ಕೆಲಸ ಮಾಡುತ್ತೇನೆ, ಭತ್ತದ ವ್ಯವಹಾರ ಮಾಡುತ್ತೇನೆ, ಹಾಗೆ ಕೃಷಿ ಕೂಲಿ ಕೆಲಸ ಮಾಡುತ್ತೇನೆ. ನನ್ನ ಖಾಯಂ ಉದ್ಯೋಗ ಕೃಷಿ ಅಲ್ಲ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಉದ್ಯೋಗ ರೈತ ಎಂದು ಹೇಳಿರುತ್ತೇನೆ.

4. ದಿಃ 12-04-1989 ರಲ್ಲಿ ದಾವಾಸ್ತಿಯನ್ನು 2 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಹಾಗೆ ಖರೀದಿ ಮಾಡಿದ ದಿನದಿಂದ ಇವತ್ತಿನವರೆಗೆ ದಾವಾಸ್ತಿ 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯವರು ದಾವಾಸ್ತಿಯನ್ನು ಖರೀದಿ ಮಾಡಿದ ಸಂದರ್ಭದಲ್ಲಿ ಅವರು ಮಸ್ಕತ್ ದೇಶದಲ್ಲಿ ಇದ್ದರು ಎಂದರೆ ಸರಿ. ಹಾಗಾಗಿ ಅವರಿಗೆ ದಾವಾ ಜಮೀನಿನಲ್ಲಿ ಸ್ವಂತವಾಗಿ ಸಾಗುವಳಿ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿ. ಹಾಗಾಗಿ 2 ನೇ ಪ್ರತಿವಾದಿಯವರು ದಾವಾ ಜಮೀನಿನಲ್ಲಿ ಸಾಗುವಳಿ ಮಾಡಲು ಮತ್ತು ಅದರ ಉತ್ಪನ್ನವನ್ನು ಪಡೆಯಲು ಜವಾಬ್ದಾರಿ ನನಗೆ

ನೀಡಿದ್ದರು ಎಂದರೆ ಸರಿ. ಹಾಗಾಗಿ 2 ನೇ ಪ್ರತಿವಾದಿಯವರು ನನಗೆ ದಿಃ 30-06-2004 ರಂದು ನನಗೆ ಸಾಮಾನ್ಯ ಮೊಕ್ತ್ಯಾರನಾಮೆಯನ್ನು ನೀಡಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಯವರಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಸದ್ರಿ ಸಾಮಾನ್ಯ ಮೊಕ್ತ್ಯಾರನಾಮೆಯನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ನನಗೂ ಸಹ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನನಗೆ ಕನ್ನಡ ಭಾಷೆಯನ್ನು ಓದಿ ಹೇಳಿದರೆ ಅರ್ಥ ಆಗುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯವರು ನನಗೆ ಸಾಮಾನ್ಯ ಮೊಕ್ತ್ಯಾರನಾಮೆಯನ್ನು ಮಾಡಿದಾಗ ಆತನಿಗೆ 51 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸದ್ರಿ ಮೊಕ್ತ್ಯಾರನಾಮೆಯಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಸದ್ರಿ ಮೊಕ್ತ್ಯಾರನಾಮೆ ಮಾಡಿಕೊಟ್ಟ ಕಾಲಕ್ಕೆ 2 ನೇ ಪ್ರತಿವಾದಿ ಆರೋಗ್ಯವಾಗಿದ್ದರು ಎಂದರೆ ಹೌದು. ಸದ್ರಿ ಮೊಕ್ತ್ಯಾರನಾಮೆಯ ಮೂಲ ಪ್ರತಿ ನನ್ನ ಬಳಿ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲು ಹೌದು ಎಂದು ನಂತರ ನನ್ನ ಬಳಿ ಅದರ ಛಾಯಾ ಪ್ರತಿ ಮಾತ್ರ ಇತ್ತು ಎಂದು ನುಡಿದಿರುತ್ತಾರೆ. ನಾನು 2004 ರ ಮೊಕ್ತ್ಯಾರನಾಮೆಯ ಆಧಾರದಲ್ಲಿ 2017 ರವರೆಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರವನ್ನು ಮಾಡಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಮೂಲ ಮೊಕ್ತ್ಯಾರನಾಮೆಯ ಪ್ರತಿ ಇಲ್ಲದೇನೆಯೇ ಛಾಯಾ ಪ್ರತಿಯ ಆಧಾರದಲ್ಲಿ ಯಾವುದೇ ವ್ಯವಹರಣೆ ಮಾಡಲು ಸಾಧ್ಯ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಛಾಯಾ ಪ್ರತಿಯ ಆಧಾರದಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಛಾಯಾಪ್ರತಿಯ ಆಧಾರದಲ್ಲಿ 2004 ರಿಂದ 2017 ರವರೆಗೆ 2 ನೇ ಪ್ರತಿವಾದಿಯವರ ಅನುಪಸ್ಥಿತಿಯಲ್ಲಿ ದಾವಾ ಸ್ವತ್ತಿನ ಮೇಲೆ ಸಹಕಾರಿ ಸಂಘಗಳಲ್ಲಿ ಸಾಲ ಪಡೆದು ತಿರುವಳಿ ಮಾಡಿಕೊಂಡು ಬಂದಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು 2 ನೇ ಪ್ರತಿವಾದಿಯವರು ಸ್ವತಃ ಬಂದು ಸಹಿ ಮಾಡಿ ಸಾಲ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಹೇಳುವಂತೆ 2 ನೇ ಪ್ರತಿವಾದಿಯವರು ಸ್ವತಃ ಬಂದು ಸಾಲ ಪಡೆದುಕೊಂಡಿದ್ದರೆ ನನಗೆ ಮೊಕ್ತ್ಯಾರನಾಮೆಯನ್ನು ನೀಡುವ ಅವಶ್ಯಕತೆ ಅವರಿಗಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು 2 ನೇ ಪ್ರತಿವಾದಿಯವರು ಬ್ಯಾಂಕಿಗೆ ಬಂದು ಸಾಲ ಪಡೆದು ನಾನೇ ವ್ಯವಹಾರ ನೋಡಿಕೊಳ್ಳುತ್ತೇನೆ ಎಂದು ಹೇಳಿ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. 2004 ನೇ ಇಸ್ವಿಯಲ್ಲಿ ಈ ಮೇಲೆ ಹೇಳಿದಂತೆ 2 ನೇ ಪ್ರತಿವಾದಿಯವರು ನೀಡಿದ ಮೊಕ್ತ್ಯಾರನಾಮೆಯಲ್ಲಿ ಅವರ ಅನಾರೋಗ್ಯದ ನಿಮಿತ್ತ ಸದ್ರಿ ಮೊಕ್ತ್ಯಾರನಾಮೆಯನ್ನು ಮಾಡುತ್ತಿದ್ದೇನೆ ಎಂದು ನಮೂದು ಮಾಡಿರುವುದಿಲ್ಲ. 2 ನೇ ಪ್ರತಿವಾದಿಯವರು ತಾನು ಹೊರದೇಶದಲ್ಲಿ ಇರುವ ಕಾರಣಕ್ಕಾಗಿ ಮೊಕ್ತ್ಯಾರನಾಮೆಯನ್ನು ನೀಡಿದ್ದು ಅನಾರೋಗ್ಯದ ಕಾರಣಕ್ಕಾಗಿ ಅಲ್ಲ ಎಂದರೆ ಸರಿ. 2004 ರಿಂದ 2017 ರವರೆಗೆ ದಾವಾ ಸ್ವತ್ತಿನ ಮೇಲೆ ಪಡೆದ ಸಾಲವನ್ನು ನಾನು ತಿರುವಳಿ ಮಾಡಿಕೊಂಡು ಬಂದಿರುತ್ತೇನೆ.

5. 2017 ನೇ ಇಸ್ವಿಯಲ್ಲಿ ದಾವಾ ಸ್ವತ್ತಿನ ಮೇಲೆ ನಾನು 3 ಲಕ್ಷ ರೂಪಾಯಿ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯವರು 2018 ನೇ ಇಸ್ವಿಯಲ್ಲಿ ಮಸ್ಕತ್ ದೇಶವನ್ನು ಬಿಟ್ಟು ಮುಂಡಗೋಡಿಗೆ ಬಂದು ಖಾಯಂ ನಿವಾಸಿಗಳಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಹೌದು. ಈ ಮೇಲೆ ಹೇಳಿದಂತೆ 2017 ನೇ ಇಸ್ವಿಯಲ್ಲಿ ಪಡೆದ 3 ಲಕ್ಷ ರೂ. ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ಸದ್ರಿ ಸಾಲವನ್ನು 2019 ನೇ ಇಸ್ವಿಯಲ್ಲಿ 1 ಮತ್ತು 2 ನೇ ಪ್ರತಿವಾದಿಯವರು ತಿರುವಳಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 2004 ನೇ ಇಸ್ವಿಯ ಮೊಕ್ತ್ಯಾರನಾಮೆಯಂತೆ ನಾನೇ

ಸದ್ರಿ ಸಾಲವನ್ನು ಮರುಪಾವತಿ ಮಾಡಬೇಕಾಗಿತ್ತು ಎಂದರೆ ಆ ರೀತಿ ಸದ್ರಿ ಮೊಕ್ತ್ಯಾರನಾಮೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿ ಸ್ವತಃ ಮುಂದುವರೆದು 2004 ರಲ್ಲಿ ಮತ್ತು 2017 ರಲ್ಲಿ ನೀಡಿದ ಮೊಕ್ತ್ಯಾರನಾಮೆಗಳನ್ನು ಪ್ರತಿವಾದಿಗಳು ರದ್ದುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. 2004 ರ ಮೊಕ್ತ್ಯಾರನಾಮೆಯಂತೆ ದಾವಾ ಆಸ್ತಿಯಲ್ಲಿ ಬೆಳೆದಂತ ಬೆಳೆಗಳನ್ನು ಮಾರಾಟ ಮಾಡಲು ಮತ್ತು ಅದರಿಂದ ಬಂದ ಹಣವನ್ನು ಸೂಕ್ತ ರೀತಿಯಲ್ಲಿ ಬಳಸಲು ಸದ್ರಿ ಅಧಿಕಾರ ಪತ್ರವನ್ನು ನೀಡಲಾಗಿತ್ತು ಎಂದರೆ ಸರಿ.

6. 2004 ರಿಂದ 2018 ರವರೆಗೆ ದಾವಾ ಆಸ್ತಿಯಲ್ಲಿ ಬೆಳೆದಂತಹ ಉತ್ಪನ್ನ ಎಷ್ಟು, ಸಾಮವಳಿ ಮಾಡಿದ ಖರ್ಚು ಎಷ್ಟು ಎಂದು ಲೆಕ್ಕ ಇಟ್ಟುಕೊಂಡಿರುತ್ತೇನೆ. ಆ ಬಗ್ಗೆ ನಾನು ಲೆಕ್ಕದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನಾನು ಯಾವುದೇ ದಾಖಲಾತಿ ಹಾಜರ ಪಡಿಸದಿದ್ದರೂ ಸಹ ಹಾಜರಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**ಸಿವಿಲ್ ಜಡ್ಜ, ಮುಂಡಗೋಡ.**